

ಆನೆ ದಾಳಿ ತಡೆಯಲು ನಿರ್ಮಿಸಿದ್ದ ಕಂದಕ

ಕಾಡಾನೆಗಳಿಗೆ ಪ್ರತಿನಿತ್ಯ 300 ಕೆಜಿಯಷ್ಟು ಆಹಾರವಾದರೂ ಬೇಕು. ದಿನದ ಬಹುತೇಕ ಸಮಯದಲ್ಲಿ ಏನನ್ನಾದರೂ ಮೆಲ್ಲುತ್ತಲೇ ಇರುತ್ತವೆ ಕರಿಪಡೆ. ಅವುಗಳಿಗೆ ಬೇಕಾದ ಬಿದಿರು, ಹಸಿ ಹುಲ್ಲು ಕಾಡಲ್ಲಿ ಸಿಗುತ್ತಿಲ್ಲ. ಅರಣ್ಯದಂಚಿನ ಜಮೀನುಗಳಲ್ಲಿ ಕಬ್ಬು, ಭತ್ತ, ಬಾಳೆ ಬೆಳೆಯುವುದರಿಂದ ಆನೆಗಳು ಗುಂಪು ಗುಂಪಾಗಿ ಲಗ್ಗೆ ಇಡುವುದು ಹೆಚ್ಚಿದೆ. ಬೆಳಿಗ್ಗೆ ಇಲ್ಲವೇ ಸಂಜೆ ವೇಳೆ ಅವುಗಳ ಸಂಚಾರ ಅಧಿಕ. ಆಹಾರಕ್ಕೆ ಬಂದಾಗ ಜನ, ಜಾನುವಾರು ಸಿಲುಕಿ ಮೃತಪಟ್ಟಿರುವುದು ಇದೆ.

ಕರ್ನಾಟಕದಲ್ಲಿ ಹುಲಿ, ಚಿರತೆ, ಆನೆ ಸಹಿತ ಇತರೆ ಪ್ರಾಣಿಗಳು ಹೊರ ಬಂದು ದಾಳಿ ಮಾಡುವುದರಿಂದ ಸಾವಿನ ಸಂಖ್ಯೆ, ಮಾನವ ವನ್ಯಜೀವಿಗಳ ಸಂಘರ್ಷ ಹೆಚ್ಚಾಗಿದೆ. ಆಹಾರ, ನೀರು ಅಲ್ಲಿಯೇ ಸಿಕ್ಕರೆ ಪ್ರಾಣಿಗಳು ಹೊರಕ್ಕೆ ಬರುವುದಿಲ್ಲ. ವನ್ಯಜೀವಿಗಳು ಕಾಡಿನಿಂದ ಹೊರ ಬಾರದಂತೆ ತಡೆಯಲು ಅಲ್ಲಿಯೇ ಆಹಾರ ಲಭ್ಯವಾಗುವಂತೆ ನೋಡಿಕೊಳ್ಳಬೇಕು. ವಿಶೇಷವಾಗಿ ಆನೆಗಳಿಗೆ ಈ ವ್ಯವಸ್ಥೆ ಮಾಡಿದರೆ ಸಂಘರ್ಷ ತಗ್ಗಿಸಬಹುದು ಎನ್ನುವ ಸಲಹೆಯಿದ್ದರೂ ಆಹಾರ ಲಭ್ಯತೆ ಪ್ರಮಾಣ ಹೆಚ್ಚಳಕ್ಕೆ ಇಲಾಖೆ ಗಂಭೀರವಾಗಿಯೇ ಯೋಚಿಸಬೇಕಿದೆ.

## ತಂತ್ರಜ್ಞಾನದಲ್ಲೂ ಮುಂದೆ

ವನ್ಯಜೀವಿ ಹಾಗೂ ಮಾನವ ಸಂಘರ್ಷ ವಿಭಿನ್ನ ಸ್ವರೂಪ ಪಡೆಯುತ್ತಿರುವಾಗಲೇ ಕರ್ನಾಟಕ ಅರಣ್ಯ ಇಲಾಖೆಯು ತಂತ್ರಜ್ಞಾನವನ್ನು ಬಳಸಿಕೊಂಡು ಸಂಘರ್ಷ ತಗ್ಗಿಸಲು ಪ್ರಯತ್ನ ನಡೆಸುತ್ತಲೇ ಇದೆ. ಹಿಂದೆಲ್ಲಾ ಚಿರತೆ ಊರಿಗೆ ನುಗ್ಗಿದರೆ ಅದನ್ನು ಪತ್ತೆ ಮಾಡುವುದೇ ಕಷ್ಟವಾಗುತ್ತಿತ್ತು. ಹೆಜ್ಜೆ ಗುರುತು ಹಿಡಿದು ಇಲ್ಲವೇ ಬೋನು ಇರಿಸಿ ಸೆರೆಹಿಡಿಯಬೇಕಿತ್ತು. ಈಗ ಥರ್ಮಲ್ ಕ್ಯಾಮೆರಾ, ಡ್ರೋನ್ ಬಳಸಿ ಚಿರತೆಯ ಜಾಡನ್ನು 2 ಕಿ.ಮೀ. ಸುತ್ತಳತೆ ಪ್ರದೇಶದಲ್ಲಿ ಇದ್ದರೂ ಪತ್ತೆ ಮಾಡಬಹುದು. ಕ್ಯಾಮೆರಾಗಳನ್ನು ಸುತ್ತಮುತ್ತಲ ಪ್ರದೇಶಗಳಲ್ಲಿ ಇರಿಸಿ ಅವುಗಳ ಸಂಚಾರದ ಮಾಹಿತಿ ಪಡೆದುಕೊಳ್ಳಬಹುದು. ಬೋನುಗಳು ಕೂಡ ತಂತ್ರಜ್ಞಾನ, ಪರಿಸರಸ್ನೇಹಿಯಾಗಿ ರೂಪಿಸಲಾಗಿದೆ. ಚಿರತೆ ಮಾತ್ರವಲ್ಲದೇ ಹುಲಿ, ಕಾಡಾನೆಗಳ ಸೆರೆಗೂ ಇಂತಹದೇ ಕ್ರಮಗಳನ್ನು ಬಳಸಿಕೊಳ್ಳಲಾಗುತ್ತಿದೆ. ಸಿಬ್ಬಂದಿಯನ್ನೂ ತಂತ್ರಜ್ಞಾನ ಬಳಕೆಗೆ ಅಣಿಗೊಳಿಸಲಾಗುತ್ತಿದೆ. ಇದಕ್ಕಾಗಿಯೇ ಅರಣ್ಯ ಇಲಾಖೆ ಮಾಹಿತಿ ಹಾಗೂ ತಂತ್ರಜ್ಞಾನ ವಿಭಾಗವನ್ನು ರೂಪಿಸಿ ನಿಯಮಿತವಾಗಿ ಚಟುವಟಿಕೆಗಳನ್ನು ವಿಸ್ತರಿಸಿದೆ.

## ಪ್ರವಾಸೋದ್ಯಮ ಮಿತಿ

ಪರಿಸರ ಪ್ರವಾಸೋದ್ಯಮದ ಬಾಹುಗಳು ವನ್ಯಜೀವಿಗಳ ಸಾಂದ್ರತೆ ಹೆಚ್ಚಿರುವ ಅರಣ್ಯದಲ್ಲಿ ವಿಸ್ತರಣೆಗೊಂಡಿದೆ. ರೆಸಾರ್ಟ್‌ಗಳು, ಹೋಂಸ್ಟೇಗಳು ಮಿತಿಮೀರಿ ಬೆಳೆದಿವೆ. ತಮ್ಮ ಬಳಕೆಗೆ ಎಂದು ಸೃಷ್ಟಿಸಿಕೊಂಡ ವ್ಯವಸ್ಥೆಯೂ ನಿಧಾನವಾಗಿ ವಾಣಿಜ್ಯೀಕರಣದ ರೂಪ ಪಡೆದಿರುವುದು ಅರಣ್ಯದ ಮೇಲೆ ಒತ್ತಡ ಹೆಚ್ಚುವಂತೆ ಮಾಡಿದೆ.

ಹುಲಿಧಾಮಗಳು, ಸಂರಕ್ಷಿತ ಪ್ರದೇಶಗಳಲ್ಲಿ ಪರಿಸರ ಪ್ರವಾಸೋದ್ಯಮದ ಪ್ರಮಾಣ ಎಷ್ಟು ಇರಬೇಕು. ವಾಹನಗಳ ಬಳಕೆ, ಕೋರ್ ಏರಿಯಾದಲ್ಲಿ ಸಂಚಾರ ಹೇಗಿರಬೇಕು ಎನ್ನುವ ಚರ್ಚೆಗಳು ನಡೆದಿವೆ. ಹುಲಿ ಸಂರಕ್ಷಿತ ಒಟ್ಟಾರೆ ಅರಣ್ಯದ ಕೋರ್ ಪ್ರದೇಶದ ಶೇ. 20ರೊಳಗೆ ಪ್ರವಾಸೋದ್ಯಮಕ್ಕೆ ಅವಕಾಶ ನೀಡಬೇಕು ಎಂದು ಸುಪ್ರೀಂ ಕೋರ್ಟ್ ದಶಕದ ಹಿಂದೆಯೇ ತೀರ್ಪು ನೀಡಿದೆ. ಇದನ್ನೇ ಮಾನದಂಡವಾಗಿ ಬಳಸಿಕೊಳ್ಳುವಂತೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವೂ ನಿರ್ದೇಶನ ನೀಡಿದೆ. ಉತ್ತರ ಭಾರತದ ಕೆಲವು ರಾಜ್ಯಗಳಲ್ಲಂತೂ ಶೇ.25ಕ್ಕೂ ಅಧಿಕ ಪ್ರದೇಶದಲ್ಲಿ ಪ್ರವಾಸೋದ್ಯಮ ಚಟುವಟಿಕೆ ವಿಸ್ತರಣೆಗೊಂಡು ಹುಲಿ ಸಂಚರಿಸುವ ಮಾರ್ಗದಲ್ಲಿ ಸಫಾರಿ ವಾಹನಗಳು, ಘೇರಾವ್ ಹಾಕುವ ಸನ್ನಿವೇಶವನ್ನೂ ನೋಡಿದ್ದೇವೆ. ಛಾಯಾಗ್ರಾಹಕರ ಕ್ಯಾಮೆರಾಗಳು ಬಂದೂಕುಗಳಾಗಿವೆಯೇ ಎನ್ನುವಷ್ಟರ ಮಟ್ಟಿಗೂ ವಿಸ್ತರಣೆಗೊಂಡಿವೆ. ಆದರೆ ಕರ್ನಾಟಕದಲ್ಲಿ ಇಂತಹ ಸನ್ನಿವೇಶ ಹಿಂದೆ ಇರಲಿಲ್ಲ. 16 ವರ್ಷದ ಹಿಂದೆಯೇ ಸುಪ್ರೀಂ ಕೋರ್ಟ್ ನಿರ್ದೇಶನ ಆಧರಿಸಿ ನಾಗರಹೊಳೆ, ಬಂಡೀಪುರದಲ್ಲಿ ರಾತ್ರಿಸಂಚಾರ ಬಂದ್, ವಾಹನಗಳ ಸಂಚಾರಕ್ಕೆ ಮಿತಿ, ಸೀಮಿತ ಪ್ರದೇಶದಲ್ಲಿ ಸಫಾರಿ ಎನ್ನುವುದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಯಿತು.

ಆದರೆ ಈಗ ಸಫಾರಿ ವಾಹನಗಳ ಪ್ರಮಾಣ ಏರಿಕೆಯಾಗಿ ನಾಗರಹೊಳೆ ಹಾಗೂ ಬಂಡೀಪುರದಲ್ಲಿ ಹುಲಿ ಕಂಡಾಗ ಕೂಡಲೇ ಅತ್ತ ತಿರುಗಿಸಿ ಸುತ್ತಲೂ ವಾಹನಗಳ ನಿಲ್ಲುವ ಪರಿಸ್ಥಿತಿಯನ್ನೂ ಆಗಾಗ ಕಾಣುತ್ತೇವೆ. ಅಷ್ಟರ ಮಟ್ಟಿಗೆ ಈ ಸಂಪರ್ಕ ಜಾಲ ಬಲಗೊಂಡಿದೆ. ಇದಕ್ಕೆ ಮಿತಿ ಹಾಕಿದರೆ ಮಾತ್ರ ಸಂಘರ್ಷದ ಪ್ರಮಾಣ ತಗ್ಗಿಸಬಹುದು ಎನ್ನುವ ಸಲಹೆಯನ್ನು ತಜ್ಞರು ನೀಡುತ್ತಾರೆ.

ಹೆಚ್ಚುತ್ತಿರುವ ವನ್ಯಜೀವಿಗಳಿಗೆ ಅನುಗುಣವಾಗಿ ಅರಣ್ಯ ಪ್ರದೇಶ ಇದೆಯೇ ಎನ್ನುವ ನಿಖರ ಅಧ್ಯಯನಕ್ಕೆ ತಜ್ಞರ ತಂಡ ರಚಿಸಿ ವನ್ಯಜೀವಿಗಳು ಕಾಡಿನಿಂದ ನಾಡಿಗೆ ಬರುವುದಕ್ಕೆ ಕಾರಣವೇನು ಎಂಬ ಬಗ್ಗೆ ಸಮಿತಿ ತಿಳಿಸಬೇಕು. ಆ ವರದಿ ಆಧರಿಸಿ ಕ್ರಮ ಕೈಗೊಳ್ಳಲಾಗುತ್ತದೆ. ಅರಣ್ಯದಂಚಿನಲ್ಲಿ ಸಂಘರ್ಷ ತಪ್ಪಿಸಲೆಂದೇ ಜನಸಂಪರ್ಕ ಸಭೆಗಳನ್ನು ಮಾಡುವಂತೆ ಸೂಚಿಸಲಾಗಿದೆ. ಸ್ಥಳೀಯರೊಂದಿಗೆ ಸಮನ್ವಯ ಸಾಧಿಸಬೇಕು. ಸಂಘರ್ಷ ಹೆಚ್ಚಾಗಿರುವ ಜಿಲ್ಲೆಗಳಿಗೆ ಹಿರಿಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳಾಗಿ ನಿಯೋಜಿಸಿ ಉಸ್ತುವಾರಿ ನೋಡಿಕೊಳ್ಳಲಾಗುತ್ತಿದೆ ಎನ್ನುವ ವಿಚಾರ ಅರಣ್ಯ ಸಚಿವರು, ಅಧಿಕಾರಗಳ ಹಂತದಲ್ಲಿ ಚರ್ಚೆಯಾಗುತ್ತದೆ. ಇವೆಲ್ಲವೂ ತಾತ್ಕಾಲಿಕ. ದೀರ್ಘಕಾಲೀನ ಹಾಗೂ ಶಾಶ್ವತ ಪರಿಹಾರ ರೂಪಿಸಿ, ಅರಣ್ಯ ಇಲಾಖೆ ಜನಮುಖಿಯಾದರೆ ಸಂಘರ್ಷವನ್ನು ತಗ್ಗಿಸಬಹುದು ಎಂಬ ಅಭಿಪ್ರಾಯದಲ್ಲಿ ಹೆಚ್ಚಿನ ಸತ್ಯ ಅಡಗಿದೆ.

(ಚಿತ್ರಗಳು: ಸಾಂದರ್ಭಿಕ)

